ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. DW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ 13.10.2025

ಮುಂದುವರೆದ ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ

ನೀವು ದೂರುದಾರರಿಗೆ 10-12 ವರ್ಷಗಳಿಂದ ಪರಿಚಯ ಇರುವ ಕಾರಣ ಅವರ ಮನೆಯನ್ನು ನೀವೇ ಕಟ್ಟಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರತ್ನಮ್ಮ ರವರ ಹತ್ತಿರ ಎಷ್ಟು ಜನರು ಚೀಟಿ ಹಾಕಿದ್ದರು ಎಂದು ನಿಮಗೆ ಗೊತ್ತಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವು ನನ್ನ ತಾಯಿಗೆ ಮತ್ತು ರತ್ನಮ್ಮರವರಿಗೆ ಗೊತ್ತಿರುತ್ತದೆ. ಎಷ್ಟನೇ ಕಂತಿನಲ್ಲಿ ನನ್ನ ತಾಯಿರವರು ಚೀಟಿಯನ್ನು ಎತ್ತಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ "ನಾನು ಪಿರ್ಯಾದುದಾರರ ಪತ್ನಿಯಾದ ರತ್ನಮ್ಮರವರು ಚೀಟಿ ವ್ಯವಹಾರ ನಡೆಸುತ್ತಿದ್ದು ಅವರ ಹತ್ತಿರ ನಾನು ಮತ್ತು ನನ್ನ ತಾಯಿ ಮಾಸ್ತಮ್ಮರವರು ಜಂಟಿಯಾಗಿ ರೂ.1 ಲಕ್ಷಗಳ ಚೀಟಿ ಹಾಕಿದ್ದು ಸದರಿ ಚೀಟಿಯಲ್ಲಿ 15 ಕಂತುಗಳನ್ನು ಕಟ್ಟಿ 16 ನೇ ಕಂತಿಗೆ ನಾನು ಚೀಟಿಯನಳ್ಳು ಪಡೆದುಕೊಂಡಿರುತ್ತೇನೆ " ಎಂದು ಹೇಳಿ ಬರೆಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನೀವು ನಿಮ್ಮ ತಾಯಿಗೆ ಯಾವಾಗ ಚೆಕ್ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ನನ್ನ ತಾಯಿಗೆ ಚೆಕ್ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಬೀರುವಿನಲ್ಲಿ ಇದ್ದ ನನ್ನ ಚೆಕ್ ಅನ್ನು ನನ್ನ ತಾಯಿರವರು ತೆಗೆದುಕೊಂಡು ಹೋಗಿ ರತ್ನಮ್ಮರವರಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಪ್ರತ್ಯುತ್ತರ ನೋಟೀಸ್ ನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ. ಸದರಿ ಬೀರುವಿನಲಿ ಒಂದು ಚೆಕ್ ಮಾತ್ರ ಇತ್ತು. ಚೆಕ್ ಅನ್ನು ನಿಮ್ಮ ತಾಯಿರವರು ಬೀರುವಿನಿಂದ ತೆಗೆದುಕೊಂಡ ವಿಚಾರ ನಿಮಗೆ ಯಾವಾಗ ಗೊತ್ತಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ರತ್ನಮ್ಮರವರು ನನ್ನನ್ನು ಅವರ ಮನೆಯ ಹತ್ತಿರ ಕರೆಸಿದಾಗ ಈ ವಿಚಾರವನ್ನು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ರತ್ನಮ್ಮರವರು ನನ್ನನ್ನು ಕರೆಯಿಸಿ ಚೆಕ್ಕಿಗೆ ಸಹಿ ಹಾಕು ಎಂದು ಹೇಳಿದ್ದು ಅದರಂತೆ ನಾನು ನನ್ನ ಚೆಕ್ಕಿಗೆ ಸಹಿ

ಮಾಡಿರುತ್ತೇನೆ. ಸಾಮಾನ್ಯವಾಗಿ ಯಾರಾದರೂ ನಿಮ್ಮನ್ನು ಸಹಿ ಮಾಡಲು ಹೇಳಿದರೆ ಸಹಿ ಮಾಡುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲವಾದ್ದರಿಂದ ರತ್ನಮ್ಮರವರು ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಆ ರೀತಿ ರತ್ನಮ್ಮರವರು ಸಹಿ ಮಾಡಿಸಿಕೊಂಡು 3 ವರ್ಷ ಆಗಿರಬಹುದು. ಚೆಕ್ಕಿಗೆ ಸಹಿ ಹಾಕಿ ಬಂದ ನಂತರ ನಾನು ಚೆಕ್ಕಿನ ಬಗ್ಗೆ ನನ್ನ ತಾಯಿಯ ಬಳಿ ಕೇಳಿದಾಗ ಅದಕ್ಕೆ ಅವರ ಚೀಟಿ ಹಾಕಿರುವ ವಿಚಾರ ಹೇಳಿರುತ್ತಾರೆ. ಚೀಟಿ ಮುಗಿದಿರುತ್ತದೆ ಎಂದು ನೀವು ವಿಚಾರಣೆ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ರತ್ನಮ್ಮ ರವರು ಚೀಟಿಯನ್ನು ಹಾಕಿಸಿಕೊಂಡು ದುಡ್ಡನ್ನು ನೀಡಿರುವುದಿಲ್ಲ ಹಾಗೂ ಚೆಕ್ಕನ್ನು ಸಹಾ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ರತ್ನಮ್ಮರವರ ಬಳಿ ಚೆಕ್ ವಾಪಾಸ್ಸು ಕೊಡುವಂತೆ ನಾನು ಕೇಳಿರುವುದಿಲ್ಲ. ಚೆಕ್ಕನ್ನು ವಾಪಾಸ್ಸು ಕೊಡಿಸುವಂತೆ ನೀವೇನಾದರೂ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚೆಕ್ಕನ್ನು ನಗದೀಕರಣ ಮಾಡದಂತೆ ನಾನು ಬ್ಯಾಂಕಿಗೆ ಪತ್ರವನ್ನು ನೀಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಚೀಟಿ ವ್ಯವಹಾರ ಇರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರರು ಆರ್ಥಿಕವಾಗಿ ಸದೃಡವಾಗಿದ್ದು ನಾನು ಸಾಲ ಕೇಳಿದ ಕಾರಣ ಅವರು ರೂ.6 ಲಕ್ಷ ಸಾಲವನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನಿಪಿ.1 ಚೆಕ್ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹಣದ ಭಾದ್ಯತೆಯಿದ ತಪ್ಪಿಸಿಕೊಳ್ಳುವ ಸಲುವಾಗಿ ನಾನು ಸುಳ್ಳು ಪ್ರಮಾಣ ಪತ್ರಿಕೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**